ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು **ಪ್ರಥಮ ದರ್ಜೆಯ ನ್ಯಾಯಿಕ**

**ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ**

**ಸಿ.ಸಿ. ನಂ. 1109/2013**

**ಚಾ.ಸಾ. -1**
**ಪ್ರಾ.ಸಾ. - 1**

**ಸಾಕ್ಷಿದಾರರ ಹೆಸರು** : ಈರಪ್ಪ ರಾಮಪ್ಪ ಕುರಿಯರ

**ಸಾಕ್ಷಿದಾರರ ವಯಸ್ಸು** : 55 ವರ್ಷ

**ಸಾಕ್ಷಿದಾರರ ಉದ್ಯೋಗ** : ಶೇತ್ಕಿ

**ಸಾಕ್ಷಿದಾರರ ವಿಳಾಸ** : ದೇವರಶೀಗಿಹಳ್ಳಿ, ಕಿತ್ತೂರು

---

**ಪ್ರಮಾಣ ವಚನ ಮಾಡಿದ ದಿನಾಂಕ : 09.09.2025.**

**ಮುಖ್ಯ ವಿಚಾರಣೆ: ಎಪಿಪಿ ಅವರಿಂದ:**

ಚಾಸಾ 4 ಮತ್ತು 6 ರವರ ಪರಿಚಯ ಇರುವುದಿಲ್ಲ. ಚಾಸಾ 5 ನನ್ನ ಅತ್ತೆಯಾಗಬೇಕು. ಆರೋಪಿಯ ಪರಿಚಯ ಇರುವುದಿಲ್ಲ. ಮೃತ ಯಲ್ಲಪ್ಪ ನನ್ನ ಅಳಿಯನಾಗಬೇಕು. ಸುಮಾರು 15 ವರ್ಷಗಳ ಹಿಂದೆ ರಸ್ತೆ ಅಪಘಾತದಲ್ಲಿ ಅವರು ಮೃತರಾಗಿರುತ್ತಾರೆ. ನನಗೆ ಯಾರು ಕರೆ ಮಾಡಿ ಅಪಘಾತವಾದ ವಿಷಯ ತಿಳಿಸಿರುವುದಿಲ್ಲ. ನಾನು ಅವರನ್ನು ಯಾವುದೇ ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಿಲ್ಲ. ಅಪಘಾತಕ್ಕೆ ಸಂಬಂಧಪಟ್ಟಂತೆ ಯಾವುದೇ ದೂರನ್ನು ನೀಡಿರುವುದಿಲ್ಲ. ನಾನು ಪಂಚನಾಮೆಯ ಕಾಲಕ್ಕೆ ಘಟನಾ ಸ್ಥಳವನ್ನು ತೋರಿಸಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಶವಪಂಚನಾಮೆ ಜರುಗಿಸಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಮರುಹೇಳಿಕೆಗಳನ್ನು ನೀಡಿರುವುದಿಲ್ಲ.

ನನ್ನ ಸಮಕ್ಷಮ ಅಪಘಾತದ ಸಂಬಂಧ ಯಾವುದೇ ಹಾಥ ನಕಾಶೆ ತಯಾರಿಸಿರುವುದಿಲ್ಲ. ನಾನು 2013 ರಲ್ಲಿ ಬೈಲಹೊಂಗಲ ಬೆಳಗಾವಿ ರಸ್ತೆಯ ಸಂಪಗಾಂವ ಬಳಿ ಇರುವಾಗ ಪೋಲಿಸರು ಕೆಲವು ದಾಖಲೆಗಳ ಮೇಲೆ ಸಹಿ ಪಡೆದಿರುತ್ತಾರೆ. ಯಾವ ಕಾರಣಕ್ಕಾಗಿ ಸಹಿ ಪಡೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯನ್ನು ನೋಡಿ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ 1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು

ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆ ಘಟನಾ ಸ್ಥಳದಪಂಚನಾಮೆಯಾಗಿದ್ದು, ಅದನ್ನು ನಿಶಾನೆ ಪಿ 2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆ ಹಾಥ ನಕಾಶೆಯಾಗಿದ್ದು, ಅದನ್ನು ನಿಶಾನೆ ಪಿ 3 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆ ಶವಪಂಚನಾಮೆಯಾಗಿದ್ದು, ಅದನ್ನು ನಿಶಾನೆ ಪಿ 4 ಎಂದು ಗುರುತಿಸಲಾಯಿತು. ನಿಶಾನೆ ಪಿ 1 ರಿಂದ 4 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ.

(ಸಾಕ್ಷಿಯು ಅಭಿಯೋಜನ ಕೇಸಿಗೆ ವಿರುದ್ದವಾಗಿ ಸಾಕ್ಷಿ ನುಡಿದಿರುವ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ಕೋರಿಕೊಂಡಿರುವರು . ಕಡತವನ್ನು ಪರಿಶೀಲಿಸಲಾಯಿತು. ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿರುವ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು ).

**ಪಾಟೀ ಸವಾಲುಃ ಎಪಿಪಿ ಅವರಿಂದಃ**

ನಮ್ಮದು ಒಂದು ಮೋಟಾರ ಸೈಕಲ ಇತ್ತು, ಅದನ್ನು ನನ್ನ ಅಳಿಯನು ಪ್ರತಿ ದಿನ ಎಂ ಕೆ ಹುಬ್ಬಳ್ಳಿ ಯಿಂದ ಹುಬ್ಬಳ್ಳಿ ಕಡೆಗೆ ತೇಗೆದುಕೊಂಡು ಹೋಗುತ್ತಿದ್ದನು. ಈಗ್ಗೆ ಸುಮಾರು 12-13 ವರ್ಷದ ಹಿಂದೆ ರಾತ್ರಿ ಸಮಯದಲ್ಲಿ ತಡಸಲೂರಿಗೆ ಹೋಗಿ ಬರುತ್ತೇನೆ ಎಂದು ಹೋಗಿದ್ದನು ಎಂದರೆ ಸರಿಯಲ್ಲ. ರಾತ್ರಿ 01.30 ಗಂಟೆ ಸಮಯದಲ್ಲಿ 108 ಗಾಡಿಯವರು ಪೋನ್ ಮಾಡಿ ಸಂಪಗಾವ ರಸ್ತೆ ಹತ್ತಿರ ಪೆಟ್ರೋಲ್ ಬಂಕ್ ಬಳಿ ನನ್ನ ಅಳಿಯನಿಗೆ ಅಪಘಾತವಾಗಿದೆ ಎಂದ ತಿಳಿಸಿದರು ಎಂದರೆ ಸರಿಯಲ್ಲ. ನಂತರ ನಾಕಿ ಗುನ್ನೆ ಜಾಗೆಯ ಹತ್ತಿರ ಹೋಗಿ ನೋಡಿದಾಗ ಕಬ್ಬಿನ ಟ್ರ್ಯಾಕ್ಟರಗೆ ನನ್ನ ಅಳಿಯ ಡಿಕ್ಕಿಪಡಿಸಿದ್ದರಿಂದ ಅಪಘಾತ ಆಗಿ ಗಾಯ ಹೊಂದಿದ್ದರು ಎಂದರೆ ಸರಿಯಲ್ಲ, ಅಲ್ಲಿ ನಿಂತಿದ್ದ ಟ್ಯಾಕ್ಟರನ್ನು ಯಾವುದೇ ಮಾರ್ಕನ್ನು ಮಾಡದೇ ರಸ್ತೆಯ ಮೇಲೆ ನಿಲ್ಲಿಸಿದ್ದರು. ನಂತರ ನನ್ನ ಅಳಿಯನನ್ನು ಆಸ್ಪತ್ರೆಗೆ ಕರೆದದುಕುಂಡು ಹೋಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಿಸದೇ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ನಾನು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಮಧ್ಯಾಹ್ನ 01.30 ಗಂಟೆಗೆ ಗುನ್ನ ಜಾಗೆಗೆ ಬಂದು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ, ಗುನ್ನೆ ಜಾಗೆಯಿಂದ ಟ್ಯಾಕ್ಟರ ಮತ್ತು ಮೋಟಾರ ಸೈಕಲನ್ನು ಜಪ್ತಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ತೋರಿಸಿದಂತೆ ಗುನ್ನೆ ಜಾಗೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಟ್ರ್ಯಾಕ್ಟರ ಚಾಲಕನು ಮಹಾರಾಷ್ಟ್ರದವನು ಇರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ **30.10.2012** ರಂದು ಮೃತರ ಶವಪಂಚನಾಮೆಯ ಕಾಲಕ್ಕೆ ನಾನು ಹಾಜರಿರುತ್ತೇನೆ ಎಂದು ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಮರುಹೇಳಿಕೆಯನ್ನು ಅಲ್ಲಗೆಳೆದ ಕಾರಣ, ಸದರಿ ಮರುಹೇಳಿಕೆಗಳನ್ನು ನಿಶಾನೆ ಪಿ **5** ಎಂದು ಗುರುತಿಸಲಾಯಿತು. ದಿನಾಂಕ **18.12.2012** ರಂದು ಆರೋಪಿಯನ್ನು ನೋಡಿ ಗುರುತಿಸಿರುವ ಬಗ್ಗೆ ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಮರುಹೇಳಿಕೆಯನ್ನು ಅಲ್ಲಗೆಳೆದ ಕಾರಣ, ಸದರಿ ಮರುಹೇಳಿಕೆಗಳನ್ನು ನಿಶಾನೆ ಪಿ **6** ಎಂದು ಗುರುತಿಸಲಾಯಿತು.

**ವಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ**

**ಮರುವಿಚಾರಣೆ ಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ..ದಂ.ನ್ಯಾ..ಬೈಲಹೊಂಗಲ